ವಿಷಯ:- ಹುಬ್ಬಳ್ಳಿ ಗ್ರಾಮೀಣ ವಿಧಾನಸಭಾಕ್ಷೇತ್ರದ ಗಿರಣಿ ಜಾಗದಲ್ಲಿ ವಾಸವಾಗಿರುವವರಿಗೆ ಹಕ್ಕು ಪತ್ರ.

1371 (874) **ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):-** ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಗಿರಣಿ ಜಾಗದಲ್ಲಿ ಸಾವಿರಾರು ಜನರು ಕಳೆದ 50 ವರ್ಷಕ್ಕೂ ಮೇಲ್ಪಟ್ಟಿನಿಂದ ಮನೆಗಳನ್ನು ಕಟ್ಟಿಕೊಂಡು ವಾಸವಾಗಿದ್ದು ಮತ್ತು ಮಹಾನಗರ ಸಭೆ ತೆರಿಗೆ ತುಂಬುತ್ತ ಬಂದಿದ್ದರೂ ಇಲ್ಲಿಯವರೆಗೆ ಸದರೀಯವರಿಗೆ ಹಕ್ಕು ಪತ್ರಗಳನ್ನು ವಿತರಿಸದೆ ಇರುವುದರಿಂದ ಜನರು ತೊಂದರೆಗೀಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹಕ್ಕು ಪತ್ರಗಳನ್ನು ವಿತರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದಿನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಈ ಜಮೀನು ಮಹಾದೇವ ಟೆಕ್ಸ್‌ಟೈಲ್ ಮಿಲ್ ಇವರ ಒಡೆತನದಲ್ಲಿರುವುದರಿಂದ ಮಹಾನಗರ ಸಭೆಯ ವತಿಯಿಂದ ಹಕ್ಕು ಪತ್ರಗಳನ್ನು ನೀಡುವ ಸಂದರ್ಭ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:- ನಗರ ಸಭೆಗಳಿಗೆ ಸದಸ್ಯರ ನಾಮನಿರ್ದೇಶನ.

1374 (2254) **ಡಾ:ಎಂ.ಪಿ. ಕರ್ಕಿ, (ಕುಮಟಾ):-** ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಗರಸಭೆಗಳಿಗೆ ಸರ್ಕಾರವು ಸದಸ್ಯರನ್ನು ನಾಮನಿರ್ದೇಶನ ಮಾಡುವುದರ ಔಚಿತ್ಯವೇನು?

ಆ) ಹಾಗಿದ್ದಲ್ಲಿ ನಾಮ ನಿರ್ದೇಶನ ಮಾಡುವುದನ್ನು ತೆಗೆದು ಹಾಕಲಾಗುವುದೇ?

ಶ್ರೀ ಮಿರಾಜುದ್ದಿನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಮುನ್ಸಿಪಾಲಿಟಿಗಳು ಉತ್ತಮವಾಗಿ ಕೆಲಸ ನಿರ್ವಹಿಸಲು ಪರಿಣಿತಿಯನ್ನು ಒದಗಿಸುವುದಕ್ಕೋಸ್ಕರ.

ಆ) ಇಲ್ಲ.

ವಿಷಯ:- ಹಿಂದುಳಿದ ವರ್ಗದವರಿಗೆ ನೀಡುತ್ತಿರುವ ಸೌಲಭ್ಯಗಳು.

1375 (2256) **ಡಾ: ಎಂ.ಪಿ. ಕರ್ಕಿ (ಕುಮಟಾ):-** ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದ ವಿವಿಧ ಹಿಂದುಳಿದ ವರ್ಗಗಳಿಗೆ ನೀಡಿರುವ ಸೌಕರ್ಯಗಳನ್ನು ಕೇವಲ ಕೆಲವೇ ವರ್ಗದವರು ಪಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಜಾತಿ ಆಧಾರಿತ ಪ್ರಯತ್ನ ಕೈ ಬಿಟ್ಟು ಬಡತನದ ಆಧಾರದ ಮೇಲೆ ಸೌಲಭ್ಯ